ಅಧ್ಯಕ್ಷರು: ಆ ಗುತ್ತಿಗೆದಾರರಿಂದ ಏನಾದರೂ ತೊಂದರೆಯಾಗುತ್ತಿದೆಯೇ?

ಶ್ರೀ ಶರಣಬಸಪ್ಪ ದರ್ಶನಾಪುರ: ಕಳೆದ ಅಧಿವೇಶನದಲ್ಲಿ ಮಾನ್ಯ ಸದಸ್ಯರು ಇದರ ಬಗ್ಗೆ ಪ್ರಸ್ತಾಪಮಾಡಿದ್ದರು. ಆಗ ಇನ್ನೂ ಲೈನ್ ವರ್ಕ್‌ಗೆ ಮೆಟೀರಿಯಲ್ಸ್ ಕೂಡ ಕಳುಹಿಸಿರಲಿಲ್ಲ. ಈಗ ಏನು ಗುತ್ತಿಗೆದಾರರಿಂದ ತೊಂದರೆ ಇಲ್ಲ. ಅಟ್ ಪ್ರೆಸೆಂಟ್ ಬೇರೆ ಕಡೆ ಕೆಲಸ ನಡೆಯುತ್ತಿದೆ. ಈ ಒಂದು ಕೆಲಸ ಮಾತ್ರ ಫಾರೆಸ್ಟ್ ಏರಿಯಾಕ್ಕೆ ಬರತಕ್ಕಂಥದ್ದು ಮಾತ್ರ ನಿಂತಿದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ನಮ್ಮ ಪ್ರಶ್ನೆಯ 'ಉದ್ದೇಶ ಏನೆಂದರೆ, ಮೊದಲನೆಯದಾಗಿ ಈ ಯೋಜನೆಯ ಬಗ್ಗೆ, ಕಾಮಗಾರಿಯ ಬಗ್ಗೆ ಮಾಹಿತಿ ಪಡೆಯುವುದು. ಎರಡನೆಯದಾಗಿ ಅದೇರೀತಿಯಲ್ಲಿ ಅದೇ ಸಂದರ್ಭದಲ್ಲಿ ಸರ್ಕಾರ ಕೂಡ ಇದಕ್ಕೆ ಪರಿಹಾರ ಒದಗಿಸಬೇಕಾಗುತ್ತದೆ. ನಾನು ಸುಮಾರು ಮೂರು ವರ್ಷಗಳಿಂದ ಇದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಆದರೆ ಪ್ರತಿಫಲ ಸಿಗುತ್ತಿಲ್ಲ. ಇದಕ್ಕೆ ಯಾರೂ ಕೂಡ ಉತ್ತರ ಹೇಳುತ್ತಿಲ್ಲ.

ಶ್ರೀ ಶರಣಬಸಪ್ಪ ದರ್ಶಾನಾಪುರ: ನಾವು ಕಳೆದ ಅಧಿವೇಶನದಲ್ಲಿ ಇನ್ನೂ ಮೆಟೀರಿಯಲ್ಸ್ ಅಲ್ಲಿಗೆ ಕಳುಹಿಸಿರಲಿಲ್ಲ. ಎಂಟನೇ ತಿಂಗಳಲ್ಲಿ ಅವರು ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ನಾವು ಎಲ್ಲಾ ಮೆಟೀರಿಯಲ್ಸ್‌ನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ.

ಸೊರಬ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ

13 (126)

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೊರಬ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ರೈತರ ಬಗರ್ ಹುಕುಂ ಜಮೀನನ್ನು ಸಕ್ರಮಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು? ಹಾಗೂ ಯಾವಾಗ ಖಾಯಂ ಮಾಡಲಾಗುವುದು?

ಶ್ರೀ ಜೆ.ಹೆಚ್.ಪಟೀಲ್ (ಮುಖ್ಯಮಂತ್ರಿಗಳು):

ಅ) ಸರ್ಕಾರಿ ಜಮೀನುಗಳಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ರೈತರುಗಳಿಗೆ ಅಂತಹ ಜಮೀನುಗಳ ಸಕ್ರಮೀಕರಣದ ಬಗ್ಗೆ 1964ರ ಭೂ ಕಂದಾಯ ಕಾಯಿದೆಯ 94(ಎ) ಕಲಂ ರೀತ್ಯ ಸಕ್ರಮೀಕರಿಸಲು ಅವಕಾಶವಿದೆ. ಈ ಬಗ್ಗೆ 1966ರ ಕರ್ನಾಟಕ ಭೂ ಕಂದಾಯ ನಿಯಮಾವಳಿ 108 (ಬಿ)ಯಿಂದ 108 (ಎನ್) ವರೆಗೆ ನಿಯಮಗಳನ್ನು ರಚಿಸಲಾಗಿದ್ದು ಸಕ್ರಮೀಕರಣಗೊಳಿಸುವ ಬಗೆಗೆ ಸಕ್ರಮೀಕರಣ

ಸಮಿತಿಗಳು ಮೇಲ್ಕಂಡ ಕಲಂ ನಿಯಮಾವಳಿ ರೀತ್ಯ ತೀರ್ಮಾನ ಕೈಗೊಳ್ಳುತ್ತಿದ್ದು ಅದರಂತೆ ಸೊರಬ ತಾಲ್ಲೂಕಿನಲ್ಲೂ ಸಹ ಸಕ್ರಮೀಕರಣ ಸಮಿತಿ ರಚಿಸಿದ್ದು ಸಮಿತಿಯು ಕಾರ್ಯನಿರ್ವಹಿಸುತ್ತಿದೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ನಮ್ಮ ಈ ಬಗರ್‌ಹುಕುಂ ಸಾಗುವಳಿ ಮಾಡುವವರು ಕೆಲವರಿಗೆ ಹಕ್ಕುಪತ್ರಗಳು ಸಿಕ್ಕಿವೆ. ಹೀಗೆ ಸಿಕ್ಕಿದ ಮೇಲೂ ಕೂಡ ಇಲ್ಲಿ ಸಮಿತಿ ಹೇಗೆ ಕಾರ್ಯ ನಿರ್ವಹಿಸುತ್ತದೋ ಅದರ ಪ್ರಕಾರ ನಾವು ನಡೆದುಕೊಳ್ಳುತ್ತೇವೆ. ಆದರೆ ಕೆಲವರಿಗೆ ಹಕ್ಕುಪತ್ರ ಸಿಕ್ಕಿದರೂ ಕೂಡ ಎಂ.ಪಿ.ಎಂ.ನವರು ಮತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಅದರ ಮೇಲೆ ಕಂಬಿಗಳನ್ನು ಹೊಡೆಯುತ್ತಿದ್ದಾರೆ ಮತ್ತು ಕಲ್ಲುಗಳನ್ನು ಇಟ್ಟುಬಿಟ್ಟು, ಅವರು ಈಗ ಏನು ಅಲ್ಪಸ್ವಲ್ಪ ಜಮೀನುಗಳನ್ನು ಮಾಡಿಕೊಂಡಿದ್ದಾರೆ ಅದನ್ನೂ ಕೂಡ ತೆಗೆದು ನೀವು ಹೊಸದಾಗಿ ಮಾಡಬೇಕು, ಬೇರೆ ಕಡೆಗೆ ನೀವು ಹೋಗಬೇಕು ಎನ್ನತಕ್ಕಂಥ ಲೆಕ್ಕದಲ್ಲಿ ಅವರಿಗೆ ತೊಂದರೆಗಳನ್ನು ಕೊಡುತ್ತಿದ್ದಾರೆ. ಬುಲ್‌ಡೋಜರ್ ಎಲ್ಲ ತೆಗೆದುಕೊಂಡು ಬಂದು ಬಹಳಷ್ಟು ತೊಂದರೆಗಳನ್ನು ಕೊಡುತ್ತಿದ್ದಾರೆ. ಆದ್ದರಿಂದ ತಾವು ಇದಕ್ಕೆ ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು: ಬಚ್ಚೇಗೌಡರೇ, ಅವರು ಏನು ಹೇಳುತ್ತಿದ್ದಾರೆ ಎಂದರೆ ಸಾಗುವಳಿ ಚೀಟಿ ಕೊಟ್ಟಿರುತ್ತಾರಲ್ಲಾ, ಅದರಮೇಲೆ ಎಂ.ಪಿ.ಎಂ.ನವರು, ಫಾರೆಸ್ಟ್ ಡಿಪಾರ್ಟ್‌ಮೆಂಟ್ ನವರು ಟ್ರೆಂಚಸ್ ಹೊಡೆಯುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದನ್ನು ಸ್ವಲ್ಪ ನೋಡಿ...

ಶ್ರೀ ಬಿ.ಎನ್.ಬಚ್ಚೇಗೌಡ: ಸನ್ಮಾನ್ಯ ಅಧ್ಯಕ್ಷರೇ, ಸೊರಬ ತಾಲ್ಲೂಕಿನಲ್ಲಿ 28.9.96ರಲ್ಲಿ ಸಕ್ರಮೀಕರಣ ಸಮಿತಿ ಅಲ್ಲಿರಚನೆಯಾಗಿ ಇವತ್ತು ಅನೇಕ ಪ್ರಕರಣಗಳನ್ನು ಮುಗಿಸಿದ್ದಾರೆ. ಅವರು ಸುಮಾರು 65ಸಾವಿರ ಎಕರೆಗೆ ಹಾಕಿಕೊಂಡಿರತಕ್ಕಂಥಾದ್ದು. ಈಗ 11,215 ಪ್ರಕರಣಗಳು ಕಳೆದವರ್ಷ ಮುಗಿದಿದೆ. ಇನ್ನುಉಳಿದಿರತಕ್ಕಂಥಾದ್ದು 7847 ಪ್ರಕರಣಗಳು. ಬಾಕಿ ಇರತಕ್ಕಂಥಾದ್ದು ಜಮೀನು 28,754 ಎಕರೆ. ಅವರು ಕೇಳಿರತಕ್ಕಂಥ ಪ್ರಶ್ನೆ ಇದು. ಮಂಜೂರು ಆಗಿರತಕ್ಕಂಥಾದ್ದು, ಜಮೀನಿನಲ್ಲಿ ಹಕ್ಕುಪತ್ರಗಳನ್ನು ಕೊಟ್ಟಿರತಕ್ಕಂಥಾದ್ದು ಅಲ್ಲಿ ಎಂ.ಪಿ.ಎಂ.ನವರು ಮತ್ತು ಬೇರೆಬೇರೆಯವರು ಕಂದಕ ಅಥವಾ ಬೇರೆ ತೊಂದರೆ ಕೊಡತಕ್ಕಂಥಾದ್ದರೆ ಬಗ್ಗೆ ಅವರು ಪ್ರಶ್ನೆ ಕೇಳಿಲ್ಲ.

ಅಧ್ಯಕ್ಷರು: ತಾವು ಅವರ ಹತ್ತಿರ ಕೇಳಿ ವಿವರಗಳನ್ನು ಪಡೆದುಕೊಳ್ಳಿ. ಕೆಲವು ಸಲ ಏನಾಗಿರುತ್ತದೆ ಎಂದರೆ, ಅಪ್ಲಿಕೇಷನ್ ಹಾಕಿರುತ್ತಾರೆ, ಫಾರಮ್ 50ರಲ್ಲಿ ಹಾಕಿರುತ್ತಾರೆ, ಕಮಿಟಿಯವರು ಮಂಜೂರು ಮಾಡಿರುತ್ತಾರೆ. ಅದರಮೇಲೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಯಾರಾದರೂ ಅಪೀಲ್ ಹೋಗಿರುತ್ತಾರೆ. ಆ ಡಿಟೇಲ್ಸ್

ಪಡೆದುಕೊಂಡು ಅದು ಏನಾದರೂ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿತ್ತೋ, ಅಪ್ಲಿಕೇಷನ್ ಸರಿಯಾಗಿ ಇತ್ತೋ ಇಲ್ಲವೋ, ಕಮಿಟಿಯವರು ಮಾಡಿರುವುದು ಸರಿಯೋ ತಪ್ಪೋ, ಅಥವಾ ಕಮಿಟಿಯವರು ಸರಿಯಾಗಿ ಮಾಡಿದ್ದು, ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಹಾಗೆ ಮಾಡಿದ್ದಾರೋ ಎಂಬ ವಿವರಗಳನ್ನು ತರಿಸಿಕೊಳ್ಳಿ. ತಾವೂ ಕೂಡ ವಿವರಗಳನ್ನೆಲ್ಲಾ ಕೊಡಿ.

ಶ್ರೀ ಬಿ.ಎನ್.ಬಚ್ಚೇಗೌಡ: ಉಳಿದಿರತಕ್ಕಂಥ ಪ್ರಕರಣಗಳನ್ನು 98-99ರ ಅವಧಿಯಲ್ಲಿ ಮುಗಿಸುತ್ತೇವೆ.

ಶ್ರೀ ಬಿ.ಬಿ.ಶಿವಪ್ಪ: ಒಂದು ನಿಮಿಷ. ಬಗರ್‌ಹುಕುಂ ಸಾಗುವಳಿಯಲ್ಲಿ ಕೆಲವು ನ್ಯೂನತೆಗಳು ಇವೆ. ಅವರು ಎಕರೇಜ್ ಫಿಕ್ಸ್ ಮಾಡಿದ್ದಾರೆ. ನಾಲ್ಕು ಎಕರೆ 38 ಗುಂಟೆ ಎಂದು ಮಾಡಿದ್ದಾರೆ. ಇಂಥಾದ್ದೇ ಬೆಳೆ ಬೆಳೆದಿರಬೇಕು ಎಂದು ಮಾಡಿದ್ದಾರೆ. 25-30 ವರ್ಷಗಳಿಂದ ಅಲ್ಲಿ ಅವರ ಸಂಸಾರ ಎಲ್ಲಾ ಇದೆ. ಆದರೆ ಜಾಗ ಮಂಜೂರು ಮಾಡುವುದಕ್ಕೆ ಬರುವುದಿಲ್ಲ. ಮಲೆನಾಡು ಏರಿಯಾ ಅದು. ಸೊರಬ ಎಂದರೆ ಅಲ್ಲಿ ಕಾಫಿ ಬೆಳೆದರೆ ಅವನಿಗೆ ಮಂಜೂರು ಆಗುವುದಿಲ್ಲ. ಇದು ಸ್ವಲ್ಪ ವ್ಯತ್ಯಾಸ ಮಾಡಿಕೊಟ್ಟರೆ ಸ್ವಲ್ಪ ಅನುಕೂಲವಾಗುತ್ತದೆ. ಇಲ್ಲದಿದ್ದರೆ ತುಂಬ ಜಾಗ ಮಂಜೂರು ಮಾಡುವುದಕ್ಕೆ ಬರುವುದಿಲ್ಲ. ಎಲ್ಲಾ ವಜಾ ಆಗುತ್ತದೆ. ಜಾಗ ಅವರು ಖಾಲಿ ಮಾಡುವುದಿಲ್ಲ.

ಅಧ್ಯಕ್ಷರು: ಇದರ ಉದ್ದೇಶ ಏನು ಎಂದರೆ ದುರ್ಬಲವರ್ಗಗಳಿಗೆ ಸೇರಿದವರು ಯಾರು ಇರುತ್ತಾರೆ, ಅವರು ಈ ಒತ್ತುವರಿ ಮಾಡಿದ್ದರೆ ಅವರಿಗೆ ಮಂಜೂರು ಮಾಡಿಕೊಡಬೇಕು ಎಂದು. ಕಾಫಿ ಬೆಳೆಯುವವರು, ತೇಗ ಬೆಳೆಯುವವರು ಅವರೆಲ್ಲಾ ಪ್ರಬಲಸ್ತರು. ಆದ್ದರಿಂದ ಅದಕ್ಕೆ ಅನ್ವಯಿಸಬೇಕು ಎಂಬುದು ಸರ್ಕಾರದ ಉದ್ದೇಶ ಇರಬಹುದು. ನನಗೆ ಗೊತ್ತಿಲ್ಲ.

ಶ್ರೀ ಬಿ.ಬಿ.ಶಿವಪ್ಪ: ಅಧ್ಯಕ್ಷರೇ, ನಾನು ಹೇಳಿದ್ದು ಕಾಫಿ ಬೆಳೆಗಾರರಿಗೆ ಅಲ್ಲ. ಯಾರೋ ಒಬ್ಬ ಆಯಾಯ ಏರಿಯಾದಲ್ಲಿ ಅದೇ ಬೆಳೆಯನ್ನು ಬೆಳೆಯಬೇಕಾಗುತ್ತದೆ. ಇವತ್ತು ಮಲೆನಾಡಿನಲ್ಲಿ ಭತ್ತ ಬೆಳೆಯಬೇಕು, ರಾಗಿ ಬೆಳೆಯಬೇಕು ಎಂದರೆ ಹೇಗೆ?

ಅಧ್ಯಕ್ಷರು: ನೋಡೋಣ.

ಶ್ರೀ ಬಿ.ಬಿ.ಶಿವಪ್ಪ: ಇದರಲ್ಲಿ ಸ್ವಲ್ಪ ನ್ಯೂನತೆ ಇದೆ.

ಅಧ್ಯಕ್ಷರು: ಸರ್ಕಾರದವರ ಆಲೋಚನೆ ಏನು?

ಶ್ರೀ ಬಿ.ಎನ್.ಬಚ್ಚೇಗೌಡ: ಅಧ್ಯಕ್ಷರೇ, ನಿಯಮಾವಳಿ ಪ್ರಕಾರ ಭೂ ಮಂಜೂರಾತಿ ಆಗುತ್ತದೆ. ಒಬ್ಬನಿಗೆ ನಾಲ್ಕೂವರೆ ಎಕರೆ ಮೇಲೆ ಇದ್ದರೆ ಅವನಿಗೆ ಬಗರ್‌ಹುಕುಂ

ಸಾಗುವಳಿಯಲ್ಲಿ ಮಂಜೂರು ಮಾಡುವುದಕ್ಕೆ ಬರುವುದಿಲ್ಲ. ಅವನಿಗೆ ಎಷ್ಟು ಹೋಲ್ಡಿಂಗ್ ಇದೆ, ಅದರಮೇಲೆ ಮಂಜೂರಾತಿ ಆಗುತ್ತದೆ.

ಶ್ರೀ ಬಿ.ಬಿ.ಶಿವಪ್ಪ: ಅದು ಅಲ್ಲ. ಹೋಲ್ಡಿಂಗ್ ಸೇರಿ ನಾಲ್ಕು ಎಕರೆ 38 ಗುಂಟೆ ಅವನಿಗೆ ಬರಬೇಕು. ಅದು ಎಕ್ಸಿಸ್ಟಿಂಗ್ ಹೋಲ್ಡಿಂಗ್-ಪ್ಲಸ್ ಅವನು ಎನ್‌ಕ್ರೋಚ್‌ಮೆಂಟ್ ಮಾಡಿರುವುದೂ ಸೇರಿದರೆ 4 ಎಕರೆ 38 ಗುಂಟೆ ಲಿಮಿಟ್ ಮಾಡಿದ್ದಾರೆ.

ಅಧ್ಯಕ್ಷರು: ಶಿವಪ್ಪನವರೇ, ಅದು ಎನ್‌ಕ್ರೋಚ್‌ಮೆಂಟ್ ಅಲ್ಲ. Encroachment is done by a powerful man. It is an unauthorised cultivation. Unauthorised cultivation is done by a helpless, poor farmer who is landless. Encroachment is done essentially by a strong man. The government is contemplating to regularise such land which is unauthorisedly being cultivagted, not encorachment. ಹೌದಾ? I hope so. ನನಗೆ ಗೊತ್ತಿಲ್ಲ. The government should explain its position.

ಶ್ರೀ ಬಿ.ಬಿ.ಶಿವಪ್ಪ: ಅಲ್ಲಲ್ಲ. ನಾನು ಏನು ಹೇಳುತ್ತಿದ್ದೇನೆ ಎಂದರೆ ಯಾರೋ ಒಬ್ಬ ಬಡವ ಇದ್ದಾನೆ. ಅವನ ಎಕ್ಸಿಸ್ಟಿಂಗ್ ಲ್ಯಾಂಡ್ ಸೇರಿ ಪಕ್ಕದಲ್ಲಿ ಅವನು ಎನ್‌ಕ್ರೋಚ್ ಮಾಡಿದರೆ ನಾಲ್ಕು ಎಕರೆ 38 ಗುಂಟೆ ಎಂದು ಲಿಮಿಟೇಷನ್ ಇದೆ. ಅಲ್ಲಿವರೆಗೆ ಅವನು ಎನ್‌ಕ್ರೋಚ್ ಮಾಡಬಹುದು. ಅದರ ಮೇಲೆ ಹೋಗುವುದಕ್ಕೆ ಆಗುವುದಿಲ್ಲ. ಅದು ಎಕ್ಸಿಸ್ಟಿಂಗ್ ಹೋಲ್ಡಿಂಗ್ ಸೇರಿ. ಆದರೆ ಇಂಥಾದ್ದೇ ಬೆಳೆ ಬೆಳೆಯಬೆಕು ಎಂದು ನಿಗದಿ ಮಾಡಿದ್ದೀರಿ. ಈಗ ನಮ್ಮಲ್ಲಿ ಕಾಫಿ ಬೆಳೆದರೆ ಮಂಜೂರು ಆಗುವುದಿಲ್ಲ, ಏಲಕ್ಕಿ ಬೆಳೆದರೆ ಮಂಜೂರು ಆಗುವುದಿಲ್ಲ.

MR. SPEAKER: You can kindly look into it.

ಶ್ರೀ ಬಿ.ಎನ್.ಬಚ್ಚೇಗೌಡ: ಅದರ ಬಗ್ಗೆ ಪರಿಶೀಲಿಸುತ್ತೇನೆ.

MR. SPEAKER: O, Yes. That is a good answer.

ಜಯನಗರ ವಿಧಾನ ಸಭಾಕ್ಷೇತ್ರದಲ್ಲಿನ ಗುರಪ್ಪನ ಪಾಳ್ಯದಲ್ಲಿ ಪೊಲೀಸ್ ಠಾಣೆ,

14 (60)

ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ಗೃಹ ರಾಜ್ಯ ಮಂತ್ರಿಗಳು ಈ